Reg No. B G 155 10-3-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೀವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಇಂಗ್ಲೀಷು ಅನೇಕ ವರ್ಷಗಳ ಕಾಲ ಭಾರತದಲ್ಲಿ ಇರುವುದು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಕಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯ ಮೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅವರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಮೋಸಗಾರನಿಗೆ ಶಿಕ್ಷೆ

ಪರದಾಲ (ಕಾಸರಗೋಡು)— ವಿದೇಶಗಳಲ್ಲಿ ಓಲು ವಿದ್ಯಾರ್ಥಿವೇತನ ದೊರಕಿಸುವುದಾಗಿ ಹೇಳಿ ಕೆಲವು ವಿದ್ಯಾರ್ಥಿಗಳಿಂದ ಹಣ ವಸೂಲ್ಮಾಡಿದ್ದ ಆಲ್ಬೆಯ ಪೌಲ್ಲಾಸಿಗೆ ಮೋಸದ ಆಪಾದನೆಗಾಗಿ 6 ವಾರ ಕಠಿಣ ಸಜೆ ವಿಧಿಸಲಾಯಿತು.

ಮಹಾರ್ಜ ಶಿಫಾರಸ್ಸು

ಬೆಂಗಳೂರು— ಮಹಾರ್ಜ ಕವಿಸರ್ವರದಿಯನ್ನು ಅನಿರ್ದಿಷ್ಟ ಕಾಲ ಮುಂದುವರಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧರಿಸಿರುವದೆಂದು ತಾವು ತಿಳಿದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು — ಶುಕ್ರವಾರ ಮಾಟಿಂಗಿನಲ್ಲಿ ಮಹಾರ್ಜ ಕವಿಸರ್ವರದಿ ಬಂದಿತ್ತಿತೆಂದೂ, ಪ್ರಧಾನಿಗಳ ಗೈರುಹಾಜರಿಯಲ್ಲಿ ಇದನ್ನು ತೆಗೆದುಕೊಳ್ಳುವದು ಸರಿಯಲ್ಲವೆಂದು ಎಲ್ಲರ ಅಭಿಪ್ರಾಯವಾಗಿದ್ದುದರಿಂದ ವಿಷಯ ಮುಂದಕ್ಕೆ ಹಾಕಲಾಯಿತೆಂದೂ ಹೇಳಿದರು.

★

ಎಮ್ಮೆ ಕಳ್ಳನಿಗೆ ಶಿಕ್ಷೆ

ಸಾಗರ— ಕೋಣಾಡ ಗ್ರಾಮದಲ್ಲಿ 6 ಎಮ್ಮೆಗಳನ್ನು ಕದ್ದ ಅನರಗಾಲದ ವೀರಭದ್ರಪ್ಪನಿಗೆ 6 ತಿಂಗಳು ಕಠಿಣ ಸಜಾ ವಿಧಿಸಲಾಯಿತು.

ವಿದ್ಯಾರ್ಥಿಗಳಿಗೆ ಕರೆ

ಹೈದರಾಬಾದು— ತೆಲಂಗಾಣಾ ಸಮ್ಮೇಳನವು, ಆ ಪ್ರದೇಶದ 9 ಜಿಲ್ಲೆಗಳ ವಿದ್ಯಾರ್ಥಿಗಳನ್ನು ಪ್ರತ್ಯೇಕ ರಾಜ್ಯ ಸ್ಥಾಪನೆಯಾಗುವವರೆ ತರಗತಿಗಳನ್ನು ಬಹಿಷ್ಕರಿಸುವಂತೆ ಕರೆಕೊಟ್ಟಿದೆ.

★

ವಿಶೇಷ ಅಂಚೆಚೀಟಿ

ನವದೆಹಲಿ— ಈ ವರ್ಷ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ 50 ನೇ ವರ್ಷದ ಗೌರವಾರ್ಥವಾಗಿ ಭಾರತ ಮತ್ತಿತರ 87 ದೇಶಗಳು ವಿಶೇಷ ಅಂಚೆಚೀಟಿ ಹೊರಡಿಸುತ್ತವೆ.

●

ರಾಷ್ಟ್ರಗೀತೆಗೆ ಅಗೌರವ

ಮಧುರೈ— ನಿನ್ನೆ ಕಾಲೇಜಿನ ದಿನಾಚರಣೆ ಸಮಾರಂಭದ ಕಡೆಯಲ್ಲಿ ರಾಷ್ಟ್ರ ಗೀತೆಗೆ ಅಗೌರವಿಸಿ, ಅದರ ಹಾಡುವಿಕೆಯನ್ನು ಅಡ್ಡಿಪಡಿಸಲಾಯಿತು.

ನಿಮ್ಮ ನೆಚ್ಚಿನ ಮೈಸೂರು ಗಂಧದ ಸಾಬೂನು
ಈಗ ಹೊಸ ರೂಪದಲ್ಲಿ ಬಂದಿದೆ.
ಅತ್ಯಾಧುನಿಕ ಸ್ವಯಂಚಾಲಿತ ವ್ಯಾಕ್ಯುಮ್ ಸೋಪ್ ಪ್ಲಾಂಟ್
ಈ ಸಾಬೂನಿಗೆ ಮೊದಲಿನ ಗೋಲಾಕಾರದ ಬದಲು
ಚೌಕಾಕಾರದ ರೂಪವನ್ನು ನೀಡಿದೆ.
ಆಕಾರದಲ್ಲಿಯ ಬದಲಾವಣೆಯಿಂದ ಅಳತೆ ಕುಗ್ಗಿಲ್ಲ
ಮತ್ತು ಸುವಾಸನೆ ಬದಲಾಗಿಲ್ಲ.
ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆ,
ಬೆಂಗಳೂರು

ಇಂಗ್ಲೀಷು

ಕೊಯಮತ್ತೂರು— ಭಾರತದಲ್ಲಿ ಅನೇಕ ವರ್ಷಗಳ ಕಾಲ ದ್ವಿಭಾಷೆಗಳಿರಬೇಗಿರುವುದರಿಂದ ಇಂಗ್ಲೀಷು ಅನೇಕ ವರ್ಷಗಳ ಕಾಲ ಭಾರತದ ಭಾಷೆಯಾಗಿರುವುದೆಂದು ಭಾರತ ನ್ಯಾಯಾಂಗ ಮಂತ್ರಿ ಶ್ರೀ ಗೋವಿಂದ ಮೆನನ್ ಹೇಳಿದರು.

★

ಮಾಸ್ಕೋ ಸ್ಥಾನ ವಿರುದ್ಧ

ತ್ರಿವೇಂದ್ರಂ ಕೇರಳ ಮುಲಾಪುರಂ ಜಿಲ್ಲೆ ನಿರ್ಮಾಣದ ಯೋಜನೆ ವಿರುದ್ಧ ಅಖಿಲ ಭಾರತ ಚಳವಳವನ್ನು ತಮ್ಮ ಪಕ್ಷ ಹೂಡುವುದೆಂದು ಜನಸಂಘದ ಅಧ್ಯಕ್ಷ ಶ್ರೀ ವಾಜಪೇಯಿ ಹೇಳಿದರು.

●

ರಷ್ಯಾದ ವೃದ್ಧ ಪಿತಾಮಹ

ರಷ್ಯಾದಲ್ಲಿ ಅತಿ ಹೆಚ್ಚು ವಯಸ್ಸಿನ 151 ವರ್ಷದ ಶಿರಿಹಸನೋವ್ ಸಾರ್ವಜನಿಕ ಚುನಾವಣೆಯಲ್ಲಿ ಕೋರೊವಿಲ್ಕಿ ಸ್ಥಳೀಯ ಕ್ಷೇತ್ರದಿಂದ ಸ್ಪರ್ಧಿಸುವರು.

★

ಹುಬ್ಬಳ್ಳಿ ಪರಿಸ್ಥಿತಿ

ಹುಬ್ಬಳ್ಳಿ— ಶನಿವಾರ ಇಲ್ಲಾದ ಕೋಮುವಾರು ಗಲಭೆಯಲ್ಲಿ ಮೂರು ಮಂದಿ ಸತ್ತು 36 ಮಂದಿ ಗಾಯಗೊಂಡರೆಂದೂ ಪರಿಸ್ಥಿತಿ ಹತೋಟಿಯಲ್ಲಿದೆಯೆಂದೂ ವರದಿಯಾಗಿದೆ.

★

ಷೇಕ್ ಅಬ್ದುಲ್ಲರು

ಜಮ್ಮು— ಗಜೇಂದ್ರಗಡಕರರ ವರದಿಯನ್ನು 'ಕಾಶ್ಮೀರಿಮುಸ್ಲಿಂರ ಮೇಲೆ ಪಿತಗರಿ" ಎಂದು ಷೇಕ್ ಅಬ್ದುಲ್ಲರು ಹೇಳಿರುವುದನ್ನು ಭಾರತ ಮಂತ್ರಿ ಶ್ರೀ ಕರಣ್ ಸಿಂಗರು ಅಲ್ಲಗಳೆದು, ಇದು ಕೆಡಕಿನ ಅಪಾಯಕಾರಿ ಹೇಳಿಕೆಯೆಂದೂ. ಅಬ್ದುಲ್ಲರು ಕೋಮುವಾರು ವಿಷಯ ಮತ್ತು ಉದ್ರೇಕ ಭಾಷಣ ಮಾಡುತ್ತಿರುವುದು ದುರದೃಷ್ಟ ವೆಂದರು.

ಇದೊಂದು ವಿಚಿತ್ರ

ಭಾರತದ ಒಂದು ಭಾಗವೆಂದು ಹೇಳಲಾಗಿರುವ ಕಾಶ್ಮೀರದಲ್ಲಿ ಕಾಶ್ಮೀರೇತರ ಭಾರತೀಯರು ಅಲ್ಲಿ ಒಂದು ಅಂಗುಲ ಭೂಮಿಯನ್ನು ಹೊಂದಲಾಗುವುದಿಲ್ಲವೆಂಬು ದು ನಿಮಗೆ ಗೊತ್ತಿಲ್ಲದಿರಬಹು.

ಪ್ಲಾಸ್ಟಿಕ್ ಪತ್ರಿಕೆ

ಪಾಪಿಯಾ (ಇಟಲಿ)— ಪ್ಲಾಸ್ಟಿಕ್ ಕಾಗದದಲ್ಲಿ ಮುದ್ರಿತವಾದ ಪ್ರಪ್ರಥಮ ಪತ್ರಿಕೆಯಾಗಿ ಸ್ಥಳೀಯ ಗಿಯೋರಿನಾಲೆ ಡಿವಾಲಿಯಾ ಕಳೆದವಾರ ಹೊರಬಿದ್ದಿತು.

ಭಾರತದ ಮತ್ತೊಂದು ಪ್ರಥಮ

ಗ್ರೀಸ್ ಇತಿಹಾಸಕಾರ ಹೆರೊಡೋಟಸ್ (ಕ್ರಿ ಪೂ 484–425) ತಾನು ಭಾರತದಲ್ಲಿ ಒಂದು ಗಿಡ ಕಂಡೆನೆಂದೂ, ಅದು ಹೆಣ್ಣಿನ ಬದಲು ಕುರಿಗಳ ಉಣ್ಣೆ ಗಿಂತಲೂ ಉತ್ತಮವಾದ ಉಣ್ಣೆ ಉತ್ಪಾದಿಸುವುದೆಂದೂ ಒಂದು ಸಮಾಲೋಚಿಸಿದ್ದನು ! ಈ ಆಶ್ಚರ್ಯಕರವಾದ ಗಿಡ– ಹತ್ತಿ ಗಿಡವು ! ಅಂದರೆ, ಕ್ರಿ ಪೂ. 5 ನೇ ಶತಮಾನದಲ್ಲಿ ಭಾರತದ ಹತ್ತಿಯು ಅದರ ಎಳೆಗಳ ರಚನೆಗೆ ಮತ್ತು ಕೋರಿಕೆಗೆ ಶ್ಲಾಘಿಸಲಾಗುತ್ತಿತ್ತು. (ಸ್ಟೇಟ್ಸ್‌ಮೆನ್)

ಡೆಲ್ಲಿಯಲ್ಲಿ ನಡೆಯುವ ಸೆಮಿನಾರಿಗೆ

ಮೈಸೂರು— ಡೆಲ್ಲಿಯಲ್ಲಿ ತಾ ॥ 11 ಮತ್ತು 12 ರಂದು ನಡೆಯುವ ಇಂಡಿಯ ಇನಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಏರ್ಪಡಿಸಿರುವ ಸೆಮಿನಾರಿನಲ್ಲಿ ಭಾಗವಹಿಸಲು ಪಾರಸಭೆ ನೇಮಿಸಿರುವ ಅಧ್ಯಕ್ಷರಾದ ಶ್ರೀ ಎಂ ಎ ತಿಮ್ಮಯ್ಯನವರೂ ಮತ್ತು ಆಳುವ ಪಕ್ಷದ ನಾಯಕರಾದ ಶ್ರೀ ಬಿ ಎ ಕೆಂಗೇಗೌಡರವರೂ ತಾ॥ 8 ರಂದು ಮೈಸೂರಿನಿಂದ ಹೊರಟಿರು.

ಗಾಂಧೀಜೀ ಮತ್ತು ಭಾರತ ವಿಷಯ ಪುಸ್ತಕಗಳು

ಅಮೇರಿಕಾದ ಉತ್ತರ ಕ್ಯಾಲಿಫೋರ್ನಿಯದ ಚಾಪಲ್ ಪಬ್ಲಿಕ್ ಲೈಬ್ರರಿಗೆ ಭಾರತ ಮತ್ತು ಗಾಂಧೀಜೀ ವಿಷಯ ಕುರಿತ ಪುಸ್ತಕಗಳನ್ನು ಸೇರಿಸಲಾಗುತ್ತಿದೆ.

ವುಡ್‌ಲ್ಯಾಂಡ್ಸ್ ಜನುಸ್ಸಿದ 2ನೇ ವಾರ

ಅಮೋಘ ಆರಂಭ

— ಚಿತ್ತಾಕರ್ಷಕ ಸಾಂಸಾರಿಕ ಹಿಂದಿ ಚಿತ್ರ —

ಘರ್ ಕಾ ಚಿರಾಗ್

ಪಾತ್ರ— ಧರ್ಮೇಂದ್ರ, ಬಿಶ್ವಜಿತ್, ವಹಿದಾ ರಹಿಮಾನ್,
ಬಾಲರಾಜ್ ಸಹಾನಿ, ದೇವ್ ಕುಮಾರ್

ನಿರ್ದೇಶನ : ಜಗದೇವ್ — ಸಂಗೀತ : ಪೂರ್ಣ ಮೋಹನ್

[ದಿನ 3 ಪ್ರದರ್ಶನಗಳು]

ಅಪೆರಾ— ಜನಪ್ರಿಯ 2ನೇ ವಾರ

— ಅತ್ಯಮೋಘ ಹಿಂದಿ ಚಿತ್ರ —

ಪರಿವಾರ್

ಮನರಂಜನೆ ತೆರಿಗೆ ಮನ್ನಾ ವಜಾಡಿದೆ ಪೂರ್ಣರಂಜಿತ

ಪಾತ್ರ : ಜಿತೇಂದ್ರ ನಂದ, ಕಾಜೋಲ್, ಓಂ ಪ್ರಕಾಶ್

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

SHAKTI
SUDHA

A Superb Tonic

Help The Gorakshana

ಆಕರ್ಷಕ ವಿಜ್ಞಾನ

ಶಾಸ್ತ್ರಿಯ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಅಭಿವೃದ್ಧಿಯ ಔಷಧಗಳಿಗಾಗಿ ನಮ್ಮಲ್ಲಿ ವಿಚಾರಿಸಿ

Protect the Cow

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri E. K. Irani, Sri M. B. Basaviah, Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 4.

Edited, Printed & Published by Dharmaprachara Niyata M S Krishna Rao (Proprietor) at the Satyavadi Press Chamarajapuram, Mysore 4.